C.R.P.67

| |
|---|
| Form No.4<br>(Criminal)<br>Deposition<br>Sheets<br>(R.P.No.57) |

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್ಃ 362/2018

**ಚಾ.ಸಾ.–21 ಪ್ರಾ.ಸಾ.–09**

**ಸಾಕ್ಷಿದಾರರ ಹೆಸರು** **ಸಿ ಮಲ್ಲಿಕ್**

**ತಂದೆಯ ಹೆಸರು** **ಲೇಟ್ ಕೆ. ಚಿಕ್ಕಣ್ಣ**

**ವಯಸ್ಸು** **57 ವರ್ಷಗಳು**

**ಉದ್ಯೋಗ** **Addl. S.P. Mysore**

**ವಾಸ** **Mysore**

**ದಿನಾಂಕಃ 24.03.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

1. ನಾನು ದಿಃ17.07.2017 ರಿಂದ ದಿಃ:02.10.2018 ರವರಗೆ ಮಳವಳ್ಳಿ ಉಪ ವಿಭಾಗದಲ್ಲಿ ಪೋಲೀಸ್ ಉಪ ಅಧಿಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಮದ್ದೂರು ಪೋಲೀಸ್ ಠಾಣೆ ಮಳವಳ್ಳಿ ಉಪ ವಿಭಾಗದ ಸರಹದ್ದಿನಲ್ಲಿ ಬರುತ್ತದೆ.

2. ದಿಃ01.09.2017 ರಂದು ಈ ಪ್ರಕರಣದ ಕಡತವನ್ನು ಮಾನ್ಯ ಮಂಡ್ಯ ಪೋಲೀಸ್ ಅಧೀಕ್ಷಕರ ಆದೇಶದಂತೆ ಚಾಸಾ–20 ರವರಿಂದ ಪಡೆದುಕೊಂಡು ತನಿಖೆ ಮುಂದುವರೆಸಿರುತ್ತೇನೆ. ಸದರಿ ಆದೇಶವನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–24** ಎಂದು ಗುರುತಿಸಲಾಗಿದೆ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ–24(ಎ)** ಎಂದು ಗುರುತಿಸಲಾಗಿದೆ. ಅದೇ ದಿನ ಮದ್ದೂರು ತಾಲ್ಲೂಕು ವಳಗರೆಹಳ್ಳಿ ಗ್ರಾಮದಲ್ಲಿರುವ ಬಾಬುಜಗಜೀವನರಾಮ್ ಕಾಲೋನಿಯಲ್ಲಿರುವ ಪಿರ್ಯಾದಿಯ ವಾಸದ ಮನೆಯ ಬಳಿ ಪಂಚರಾದ ಚಾಸಾ- 10 ಮತ್ತು 11

ರವರ ಸಮಕ್ಷಮ ಚಾಸಾ- 1 ರವರು ತೋರಿಸಿಕೊಟ್ಟಂತೆ ಮಹಜರನ್ನು ಜರುಗಿಸಿದ್ದು ಸದರಿ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–2 ಎಂದು ಗುರುತಿಸಲಾಗಿದೆ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ–2(ಸಿ)** ಎಂದು ಗುರುತಿಸಲಾಗಿದೆ. ಮಹಜರನ್ನು ಬೆಳಿಗ್ಗೆ 11.00 ರಿಂದ 12.00 ಗಂಟೆಯವರಗೆ ಜರುಗಿಸಿರುತ್ತೇನೆ. ಮಹಜರ್ ಸಮಯ ನಿಪಿ–3 ಮತ್ತು 4 ರಂತೆ ಪೋಟೋಗಳನ್ನು ತೆಗೆಸಿರುತ್ತೇನೆ. ಅದೇ ದಿನ ಚಾಸಾ- 2, 3, 8, 10 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಈ ಪ್ರಕರಣದ ಆರೋಪಿತರನ್ನು ಪತ್ತೆ ಹಚ್ಚಿ ಹಾಜರುಪಡಿಸಿಲು ಚಾಸಾ–20 ರವರಿಗೆ ಮೌಖಿಕ ಆದೇಶವನ್ನು ನೀಡಿರುತ್ತೇನೆ.

3. ದಿಃ02.09.2017 ರಂದು ಚಾಸಾ- 16 ಮತ್ತು 17 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ06.09.2017 ರಂದು ಚಾಸಾ- 12 ರವರಿಗೆ ಕೃತ್ಯ ಸ್ಥಳದ ಮನೆಯ ಮಾಲೀಕತ್ವದ ದಾಖಲೆಯನ್ನು ಒದಗಿಸುವಂತೆ ಕೋರಿಕೆ ಸಲ್ಲಿಸಿ ನಿಪಿ–20 ರಂತೆ ದಾಖಲೆಯನ್ನು ಪಡೆದುಕೊಂಡಿರುತ್ತೇನೆ. ದಿಃ18.09.2017 ರಂದು 1ನೇ ಆರೋಪಿ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ನನ್ನ ಮುಂದೆ ಹಾಜರಾಗಿದ್ದು ಸದರಿಯವರನ್ನು ವಿಚಾರಣೆಗೆ ಒಳಪಡಿಸಿ ದಸ್ತಗಿರಿ ಕ್ರಮ ಜರುಗಿಸಿ ದಸ್ತಗಿರಿ ಮಾಡಿ ನ್ಯಾಯಾಲಯದ ಆದೇಶದ ಮೇರೆಗೆ ಜಾಮೀನಿನ ಮೇರೆಗೆ ಬಿಡುಗಡೆ ಮಾಡಿರುತ್ತೇನೆ. ಸದರಿ 1ನೇ ಆರೋಪಿಯನ್ನು ಗುರುತಿಸಬಲ್ಲೆ. ಅದೇ ದಿನ ಚಾಸಾ- 7 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ23.09.2017 ರಂದು ಉಳಿದ ಆರೋಪಿತರು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ನನ್ನ ಮುಂದೆ ಹಾಜರಾಗಿದ್ದು ಸದರಿಯವರನ್ನು ವಿಚಾರಣೆಗೆ ಒಳಪಡಿಸಿ ದಸ್ತಗಿರಿ ಕ್ರಮ ಜರುಗಿಸಿ ದಸ್ತಗಿರಿ ಮಾಡಿ ನ್ಯಾಯಾಲಯದ ಆದೇಶದ ಮೇರೆಗೆ ಜಾಮೀನಿನ ಮೇರೆಗೆ ಬಿಡುಗಡೆ ಮಾಡಿರುತ್ತೇನೆ. ಸದರಿ ಆರೋಪಿತರನ್ನು ಗುರುತಿಸಬಲ್ಲೆ. (learned Counsel for Accused submits that there is no identity dispute with respect to accused).

4. ಅದೇ ದಿನ ಚಾಸಾ- 13 ರವರಿಗೆ ಪಿರ್ಯಾದಿ ಮತ್ತು ಆರೋಪಿಯ ಜಾತಿ ಪ್ರಮಾಣ ಪತ್ರವನ್ನು ಒದಗಿಸುವಂತೆ ಕೋರಿಕೆಯನ್ನು ಸಲ್ಲಿಸಿ ನಿಪಿ–7 ರಂತ ಜಾತಿ ಪ್ರಮಾಣ

ಪತ್ರವನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ- 1 ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಚಾಸಾ- 1 ರವರು ಘಟನಾ ಸಮಯದಲ್ಲಿ ತೆಗೆದಿರುವ ಪೋಟೋಗಳು ಅವರ ಮೋಬೈಲ್ ಫೋನಿನಲ್ಲಿ ಇದ್ದು ಸದರಿ ಪೋಟೋಗಳ ಪ್ರಿಂಟ್ ತೆಗೆದು ಮತ್ತು ಸದರಿ ಪೋಟೋಗಳನ್ನು ಠಾಣೆಗೆ ತಂದು ಹಾಜರುಪಡಿಸಿದನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ 12 ಪೋಟೋಗಳನ್ನು ಈಗ ನೋಡುತ್ತಿದ್ದು ಅವುಗಳನ್ನು **ನಿಪಿ–25** ಎಂದು ಗುರುತಿಸಲಾಯಿತು. (ಸದರಿ ಪೊಟೋಗಳ ಜೊತೆ ಭಾರತ ಸಾಕ್ಷ್ಯ ಅಧಿನಿಯಮ ಕಲಂ 65ಬಿ ಧೃಡಿಕರಣ ಪತ್ರ ಇಲ್ಲದ ಕಾರಣ ಸದರಿ ಪೋಟೋಗಳನ್ನು ನಿಶಾನೆಯಾಗಿ ಗುರುತಿಸಲು ಆರೋಪಿತರ ಪರ ವಕೀಲರು ತಕರಾರು ಮಾಡಿದ್ದು, ಸದರಿ ತಕರಾರಿಗೆ ಒಳಪಟ್ಟು ಗುರುತಿಸಲಾಗಿದೆ). ಅದೇ ದಿನ ಚಾಸಾ- 12 ರವರು ಈ ಘಟನೆಗೆ ಸಂಬಂದಪಟ್ಟಂತೆ ಇರುವ ಪಂಚಾಯಿತಿಯ ಸಭಾನಡವಳಿಗಳ ದಾಖಲೆಗಳನ್ನು ದೃಡೀಕರಿಸಿ ನೀಡಿರುತ್ತಾರೆ. ಸದರಿ ದಾಖಲೆಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ–15 ರಿಂದ 21 ಎಂದು ಗುರುತಿಸಲಾಗಿದೆ.

**5.** ದಿಃ05.12.2017 ರಂದು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಮಂಡ್ಯ ಇವರಿಗೆ 1ನೇ ಆರೋಪಿಯ ವಿರುದ್ದ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಲು ಅನುಮತಿಯನ್ನು ಕೋರಿ ಪತ್ರ ವ್ಯವಹಾರ ಮಾಡಿರುತ್ತೇನೆ. ಸದರಿ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–26** ಎಂದು ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು **ನಿಪಿ–26(ಎ)** ಎಂದು ಗುರುತಿಸಲಾಗಿದೆ. ಅದೇ ವಿಚಾರವಾಗಿ ಸದರಿಯವರಿಗೆ ಪುನಃ ದಿಃ30.04.2018 ರಂದು 1ನೇ ಆರೋಪಿಯ ವಿರುದ್ದ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಲು ಅನುಮತಿಯನ್ನು ಕೋರಿ ಪತ್ರ ವ್ಯವಹಾರ ಮಾಡಿರುತ್ತೇನೆ. ಸದರಿ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–27** ಎಂದು ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು **ನಿಪಿ–27(ಎ)** ಎಂದು ಗುರುತಿಸಲಾಗಿದೆ. ದಿಃ26.05.2018 ರಂದು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಮಂಡ್ಯ ರವರು ಎಸ್.ಪಿ

ರವರ ಮುಖಾಂತರ 1ನೇ ಆರೋಪಿಯನ್ನು ಬೇರೆ ಕಡೆ ವರ್ಗಾವಣೆ ಮಾಡಿರುವುದಾಗಿ ಮಾಹಿತಿಯನ್ನು ನೀಡಿರುತ್ತಾರೆ. ಸದರಿ ಮಾಹಿತಿ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–28** ಎಂದು ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು **ನಿಪಿ–28(ಎ)** ಎಂದು ಗುರುತಿಸಲಾಗಿದೆ.

6. ಮಹಜರ್ ಸಮಯ ತೆಗೆದಿರುವ ಫೋಟೋ ಗಳಿಗೆ ಸಂಬಂದಪಟ್ಟಂತೆ 65ಬಿ ಪ್ರಮಾಣ ಪತ್ರವನ್ನು ಚಾಸಾ- 18 ರವರಿಂದ ಪಡೆದುಕೊಂಡಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ–29** ಎಂದು ಗುರುತಿಸಲಾಗಿದೆ, ಅದರಲ್ಲಿ ಸಾಕ್ಷಿಯು ಗುರುತಿಸಿರುವ ಅವರ ಸಹಿಯನ್ನು **ನಿಪಿ–29(ಎ)** ಎಂದು ಗುರುತಿಸಲಾಗಿದೆ.

7. ದಿಃ31.05.2018 ರಂದು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಮಂಡ್ಯ ರವರಿಗೆ ನಿಪಿ–28 ಪತ್ರ ವ್ಯವಹಾರದಲ್ಲಿ ಸ್ಪಷ್ಟ ಮಾಹಿತಿ ಇರುವುದಿಲ್ಲ, ಅದ್ದರಿಂದ ಸ್ಪಷ್ಟ ಮಾಹಿತಿ ನೀಡುವಂತೆ ಪತ್ರ ವ್ಯವಹಾರ ಮಾಡಿರುತ್ತೇನೆ. ನಂತರ 1ನೇ ಆರೋಪಿಯ ವಿರುದ್ದ ದೋಷಾರೋಪಣಾ ಪತ್ರ ಸಲ್ಲಿಸಲು ಸಕ್ಷಮ ಪ್ರಾಧಿಕಾರದ ಅನುಮತಿ ಬಾಕಿ ಇರಿಸಿ 1 ರಿಂದ 8ನೇ ಆರೋಪಿತರ ವಿರುದ್ದ ತನಿಖೆ ಪೂರೈಸಿ ದೋಷಾರೋಪಣಾ ಪತ್ರವನ್ನು ನ್ಯಾಯಾಲಯದ ಮುಂದೆ ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್.ಡಿ.ಆರ್ ವಕೀಲರಿಂದ:**

8. ನಿಪಿ–1 ದೂರನ್ನು ಪರಿಶೀಲಿಸಿದಾಗ ಈ ಪ್ರಕರಣ ಒಂದು ನಿವೇಶನಕ್ಕೆ ಸಂಬಂದಪಟ್ಟಂತೆ ಆಗಿರುತ್ತದೆ ಎಂದು ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ. ಈ ಪ್ರಕರಣದ ಕಡತವನ್ನು ತನಿಖೆಗಾಗಿ ಪಡೆದ ಸಮಯದಲ್ಲಿ 1ನೇ ಆರೋಪಿ ಪಿರ್ಯಾದಿಯ ವಿರುದ್ದ ತನ್ನ ಕರ್ತವ್ಯಕ್ಕೆ ಅಡಚಣೆ ಉಂಟುಮಾಡಿರುತ್ತಾರೆ ಎಂದು ದೂರು ದಾಖಲು ಮಾಡಿರುವುದು ನನ್ನ ಗಮನಕ್ಕೆ ಬಂದಿರುತ್ತದೆ. ನನ್ನ ಸರಹದ್ದಿನಲ್ಲಿ ಇರುವ ಠಾಣೆಗಳಲ್ಲಿ ಯಾವುದಾದರು ಪ್ರಕರಣ ದಾಖಲಾದರೆ ತಕ್ಷಣ ಅದರ ಮಾಹಿತಿ ನಮ್ಮ ಕಛೇರಿಗೆ ಬರುತ್ತದೆ. ನಾನು ವಳಗೆರೆಹಳ್ಳಿಗೆ ಮಹಜರ್ ತಯಾರಿಸಲು ಬಂದಿರುತ್ತೇನೆ ಎನ್ನುವಾಗ ಚಾಸಾ- 1 ರವರ ವಿರುದ್ದ 1ನೇ ಆರೋಪಿ ದಾಖಲಿಸಿದ ದೂರಿನ ಬಗ್ಗೆ ಮಾಹಿತಿ ಬಂದಿರುತ್ತದೆ ಎಂದರೆ ಸರಿಯಲ್ಲ. ಮಹಜರಿಗೆ ನಾನು ಸ್ಥಳಕ್ಕೆ ಬರುವ ಪೂರ್ವದಲ್ಲಿ ಚಾಸಾ- 1 ರವರಿಗೆ ನಾನು ಯಾವುದೇ ನೋಟೀಸು

ನೀಡಿರುವುದಿಲ್ಲ, ಅವರು ಸ್ಥಳದಲ್ಲಿಯೇ ಇದ್ದರು. ಮಹಜರ್ ತಯಾರಿಸುವ ಸಮಯ ಚಾಸಾ- 1 ರವರ ವಿರುದ್ಧ 1ನೇ ಆರೋಪಿ ನೀಡಿದ ನಾನ್ ಬೇಲಬಲ್ ಜಾಮೀನು ರಹಿತ ಪ್ರಕರಣ ದಾಖಲಾಗಿದ್ದ ಕಾರಣ ಆತ ತಲೆಮರೆಸಿಕೊಂಡಿದ್ದ ಎಂದರೆ ಸರಿಯಲ್ಲ. ಮಹಜರ್ ಸಮಯ ಮಹಜರ್ ಕಾಲದಲ್ಲಿ ನಾನು ಸ್ಥಳದಲ್ಲಿ ಇದ್ದೆ ಹಾಗೂ ಚಾಸಾ- 1 ರವರು ಸ್ಥಳದಲ್ಲಿ ಇದ್ದರು ಎಂದು ತೋರಿಸುವ ಯಾವುದೇ ಪೋಟೋಗಳು ಇರುವುದಿಲ್ಲ. ನಿಪಿ–2 ಮಹಜರ್ ದಿ:01.09.2017 ರಂದು ತಯಾರಿಸಿರುವ ಮಹಜರ್ ಅಲ್ಲ ಎಂದರೆ ಸರಿಯಲ್ಲ.

9. ದಿ:31.08.2017 ರಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ನಡೆದಿರುವ ಶಾಂತಿ ಸಭೆಯಲ್ಲಿ ಚಾಸಾ- 17 ಮತ್ತು 20 ರವರು ಹಾಜರಿದ್ದರು ಎಂದು ನಿಪಿ–17 ಸಭಾ ನಡೆವಳಿಗಳ ಪ್ರಕಾರ ಕಂಡುಬರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಶಾಂತಿ ಸಭೆ ಈ ಪ್ರಕರಣದ ಘಟನೆಯ ನಂತರ ನಡೆದಿರುತ್ತದೆ. ನಿಪಿ–17 ರಲ್ಲಿ ಹೇಳಿರುವ ಶಾಂತಿ ಸಭೆ ನಡೆಯುವಾಗ ಈ ಪ್ರಕರಣ ದಾಖಲಾಗಿರುವುದಿಲ್ಲ. ನಿಪಿ–17 ರಲ್ಲಿ ಹೇಳಿರುವ ಶಾಂತಿ ಸಭೆ ನಡೆಯುವಾಗ ಮದ್ದೂರು ಠಾಣಾ ಪಿ.ಎಸ್.ಐ, ಪಿ.ಐ, ಪಿಡಿಒ, ಗ್ರಾಮ ಪಂಚಾಯಿತಿಯ ನೌಕರರು ಹಾಜರಿದ್ದರು. ಈ ಶಾಂತಿ ಸಭೆ ನಡೆಯುವಾಗ ಈ ಪ್ರಕರಣದ ಘಟನೆಯ ಬಗ್ಗೆ ನನಗೆ ಮಾಹಿತಿ ಇರಲಿಲ್ಲ. ಸದರಿ ಶಾಂತಿ ಸಭೆ ನಡೆಯುವ ಸಮಯದಲ್ಲಿ ಚಾಸಾ- 17 ರವರಾಗಲೀ ಚಾಸಾ- 20 ರವರಾಗಲೀ ಈ ಪ್ರಕರಣದ ಘಟನೆ ನಡೆದಿರುವ ಬಗ್ಗೆ ಯಾವುದೇ ಪತ್ರ ವ್ಯವಹಾರ ನನಗೆ ಮಾಡಿರುವುದಿಲ್ಲ. ನಿಪಿ–17 ರ ಶಾಂತಿ ಸಭೆ ನಡೆಯುವ ಪೂರ್ವದಲ್ಲಿ ಈ ಪ್ರಕರಣದಲ್ಲಿ ಹೇಳಿರುವಂತಹ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಶಾಂತಿ ಸಭೆ ನಡೆಯುವ ಸಂದರ್ಭದಲ್ಲಿ ಈ ಪ್ರಕರಣದ ಘಟನೆ ನಡೆದಿದೆ ಎನ್ನುವ ಬಗ್ಗೆ ಶಾಂತಿಸಭೆಯಲ್ಲಿ ಭಾಗವಹಿಸಿದ ಯಾವುದೇ ಮಾಹಿತಿ ಯಾರಿಗೂ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ–17 ರ ಶಾಂತಿಸಭೆಯನ್ನು ನಡೆಸುವ ಉದ್ದೇಶ ಸದರಿ ವಳಗೆರೆಹಳ್ಳಿ ಗ್ರಾಮದಲ್ಲಿ ದಲಿತರಿಗೆ ಕಟ್ಟಿಂಗ್ ಮಾಡುವ ವ್ಯವಸ್ಥೆ ಇರಲಿಲ್ಲ, ಅದನ್ನು ಪಿರ್ಯಾದಿ ಪ್ರಶ್ನಿಸಿದ್ದು ಆದಕಾರಣ ಪಿರ್ಯಾದಿಯ ಮನೆಯನ್ನೆ ಕಟ್ಟಿಂಗ್ ಶಾಪನ್ನಾಗಿ ಮಾಡುತ್ತೇವೆಂದು ಆರೋಪಿತರು ಆತನ ಮನೆಯಲ್ಲಿದ್ದ ವಸ್ತುಗಳನ್ನು ಹೊರಗೆ ಎಸೆದು ಕನ್ನಡಿ ಮತ್ತು ಕುರ್ಚಿಯನ್ನು

ಆತನ ಮನೆಯ ಒಳಗೆ ಇಡಲು ಪ್ರಯತ್ನಿಸಿದ್ದರು, ಈ ವಿಚಾರ ತಿಳಿದು ಚಾಸಾ- 17 ಮತ್ತು ಚಾಸಾ- 20 ರವರು ಸ್ಥಳಕ್ಕೆ ಹೋಗಿ ನಂತರ ಶಾಂತಿ ಸಭೆ ನಡೆದಿರುತ್ತದೆ. ಈ ಮೇಲೆ ಹೇಳಿದ ವಿಚಾರ ನಿಪಿ–17 ದಾಖಲೆಯಲ್ಲಿ ಎಲ್ಲಿಯೂ ನಮೂದು ಆಗಿರುವುದಿಲ್ಲ ಎಂದರೆ ಸರಿ. 2 ರಿಂದ 8ನೇ ಆರೋಪಿತರು ಪಿರ್ಯಾದಿಯ ಮನೆಯ ಒಳಗೆ ಅತಿಕ್ರಮ ಪ್ರವೇಶ ಮಾಡಿ ಜಾತಿ ನಿಂದನೆ ಮಾಡಿ ಪಿರ್ಯಾದಿಯ ಮನೆಯಲ್ಲಿದ್ದ ವಸ್ತುಗಳನ್ನು ಹೊರಗೆ ಬಿಸಾಡಿ ಕುರ್ಚಿ ಮತ್ತು ಕನ್ನಡಿಯನ್ನು ಒಳಗೆ ಇಡಲು ಪ್ರಯತ್ನಿಸಿದರು ಆದ ಕಾರಣ ಶಾಂತಿ ಸಭೆಯನ್ನು ನಡೆಸಲಾಗುತ್ತಿದೆ ಎಂದು ನಿಪಿ–17 ನಮೂದು ಇರುವುದಿಲ್ಲ.

10. ಕೃತ್ಯ ನಡೆದಿದೆ ಎನ್ನುವ ಸ್ಥಳ ದಾಖಲೆಗಳ ಅನ್ವಯ ಶಂಕರಯ್ಯ ಬಿನ್ ಯಳವಯ್ಯ ಎನ್ನುವವರ ಹೆಸರಿನಲ್ಲಿ ಇದೆ. ಸದರಿ ಸ್ವತ್ತು ಚಾಸಾ- 1 ರವರಿಗೆ ಸಂಬಂದಪಟ್ಟಿರುತ್ತದೆ ಎಂದು ತೋರಿಸುವ ಯಾವುದಾದರೂ ದಾಖಲೆ ತನಿಖಾ ವೇಳೆಯಲ್ಲಿ ನನ್ನ ಗಮನಕ್ಕೆ ಬಂದಿರುವುದಿಲ್ಲ. ದಿಃ01.09.2017 ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿದಾಗ ಪಿರ್ಯಾದಿಗೆ ಸಂಬಂದಪಟ್ಟ ಎರಡು ಆರ್.ಸಿ.ಸಿ ಮನೆಗಳು ಇರುವುದು ನನ್ನ ತನಿಖೆಯಲ್ಲಿ ಮನವರಿಕೆ ಆಗಿರುತ್ತದೆ. ದಾಖಲಾತಿಗಳನ್ನು ಪರಿಶೀಲನೆ ಮಾಡಿದಾಗ ಕೃತ್ಯ ಸ್ಥಳವನ್ನು ಬಾರ್ಬರ್ ಶಾಪಿಗಾಗಿ ಕೊಡಬೇಕೆಂದು ಪಂಚಾಯಿತಿಯಲ್ಲಿ ತೀರ್ಮಾನವಾಗಿರುವ ಅಂಶ ಕಂಡುಬಂದಿರುತ್ತದೆ. ಈ ಪ್ರಕರಣದಲ್ಲಿ 1ನೇ ಆರೋಪಿ ಮತ್ತು ಇತರೆ ಪಂಚಾಯಿತಿಯ ನೌಕರರು ಭಾಗಿಯಾಗಿರುವ ಬಗ್ಗೆ ಅವರ ಮೇಲಾಧಿಕಾರಿಗಳಿಗೆ ಯಾವುದೆ ಪತ್ರ ವ್ಯವಹಾರ ಮಾಡಿರುವುದಿಲ್ಲ. ಪಿರ್ಯಾದಿಯನ್ನು ಹೊರತುಪಡಿಸಿ ಬೇರೆ ಯಾರೂ ಗ್ರಾಮ ಸಭೆಯಲ್ಲಿ ದಲಿತರಿಗೆ ಕಟ್ಟಿಂಗ್ ಮಾಡುವುದಿಲ್ಲ ಎಂದು ದೂರು ಅರ್ಜಿ ಸಲ್ಲಿಸಿರುವುದಿಲ್ಲ ಎಂದು ನನ್ನ ಗಮನಕ್ಕೆ ಬಂದಿರುತ್ತದೆ. ನನ್ನ ತನಿಖಾ ವೇಳೆಯಲ್ಲಿ ಕೃತ್ಯ ನಡೆದಿದೆ ಎನ್ನುವ ಸ್ಥಳವನ್ನು ಬಾರ್ಬರ್ ಶಾಪಿಗೆ ಕೊಡಬೇಕು ಎಂದು ಪಂಚಾಯಿತಿಯಲ್ಲಿ ತೀರ್ಮಾನ ಆಗಿರುವ 2 – 3 ದಿನಗಳ ನಂತರ ಪಿರ್ಯಾದಿ ಈ ಪ್ರಕರಣದ ದೂರನ್ನು ಸಲ್ಲಿಸಿರುತ್ತಾರೆ ಎಂದು ಕಂಡುಬರುತ್ತದೆ. ಠಾಣಾ ಮೊಕದ್ದಮೆ ಸಂಖ್ಯೆ 381/2017 ರಂತೆ ಚಾಸಾ- 1 ರವರು ಸಲ್ಲಿಸಿದ ದೂರಿನ ಮೇರೆಗೆ ಪ್ರಕರಣ ದಾಖಲಾಗಿ ನಾನೇ ಅದನ್ನುತನಿಖೆ ನಡೆಸಿ ಅಂತಿಮ ವರದಿಯನ್ನು ನ್ಯಾಯಾಲಯದ

ಮುಂದೆ ಸಲ್ಲಿಸಿರುತ್ತೇನೆ. ಸದರಿ ಪ್ರಕರಣಕ್ಕೆ ಸಂಬಂದಪಟ್ಟ ಪ್ರಥಮ ವರ್ತಮಾನ ವರದಿ, ದೂರು, ಸಾಕ್ಷಿದಾರರ ಹೇಳಿಕೆಗಳು, ಮಹಜರುಗಳು, ಸಾಕ್ಷಿದಾರರ ನ್ಯಾಯಾಲಯದಲ್ಲಿ ಹೇಳಿರುವ ಹೇಳಿಕೆಗಳು ಇವುಗಳ ದೃಡೀಕೃತ ಪ್ರತಿಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ಒಟ್ಟಾಗಿ **ನಿಡಿ–2** ಎಂದು ಗುರುತಿಸಲಾಗಿದೆ.

11. ನಿಪಿ–17 ರಂತೆ ಶಾಂತಿ ಸಭೆಯ ನಡವಳಿಗಳಲ್ಲಿ ಗ್ರಾಮದಲ್ಲಿ ಯಾವುದೇ ಅಸ್ಪೃಶತೆಯ ಆಚರಣೆಗಳು ಇರುವುದಿಲ್ಲ, ದಲಿತರಿಗೆ ಮತ್ತು ಎಲ್ಲಾ ವರ್ಗದ ಜನರಿಗೂ ಕಟಿಂಗ್ ಮತ್ತು ಶೇವಿಂಗ್ ಮಾಡಲಾಗುತ್ತಿದೆ ಎಂದು ಪೋಲೀಸರ ಸಮಕ್ಷಮ ಅಭಿಪ್ರಾಯ ಪಡೆಯಲಾಗಿದೆ ಎಂದರೆ ಸರಿ. ನನ್ನತನಿಖಾ ಕಾಲದಲ್ಲಿ ಚಾಸಾ- 1 ರವರು ಅಕ್ರಮವಾಗಿ ಅವರ ಬಳಿ ಇಟ್ಟು ಕೊಂಡಿದ್ದ ಆಸ್ತಿಯನ್ನು ಉಳಿಸಿಕೊಳ್ಳುವ ಸಲುವಾಗಿ ಈ ಪ್ರಕರಣದ ಸುಳ್ಳು ದೂರನ್ನು ದಾಖಲಿಸಿರುತ್ತಾರೆ ಎಂದು ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ. ದಿಃ01.09.2017 ರಂದು ನಾನು ಗ್ರಾಮಕ್ಕೆ ಹೋಗಿರುವುದೂ ಇಲ್ಲ, ಮಹಜರ್ ಕ್ರಮ ಜರುಗಿಸಿರುವುದೂ ಇಲ್ಲ ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

12. ತನಿಖಾ ವೇಳೆಯಲ್ಲಿ ಚಾಸಾ- 1 ರವರು ನಿಪಿ–25 ಪೋಟೋಗಳನ್ನು ಹಾಜರುಪಡಿಸಿರುತ್ತಾರೆ ಎನ್ನುವ ಸಮಯ ಅವರ ಮೋಬೈಲ್ ಫೋನನ್ನು ಪರೀಶೀಲನೆ ಮಾಡಿರುವುದಿಲ್ಲ, ಅಮಾನತುಪಡಿಸಿಕೊಂಡಿರುವುದಿಲ್ಲ. ನಿಪಿ–25 ಪೋಟೋಗಳನ್ನು ಚಾಸಾ- 1 ರವರಿಂದ ಪಡೆದುಕೊಳ್ಳುವ ಸಮಯ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–25 ಪೋಟೋಗಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಸದರಿ ಪೋಟೋಗಳನ್ನು ಸುಳ್ಳಾಗಿ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತನಿಖಾ ವೇಳೆ ಚಾಸಾ- 1 ಮತ್ತು ಒಳಗೆರೆಹಳ್ಳಿ ಗ್ರಾಮ ಪಂಚಾಯಿತಿ ಮದ್ಯೆ ಒಂದು ನಿವೇಶನಕ್ಕೆ ಸಂಬಂದಪಟ್ಟಂತೆ ವೈಮನಸ್ಯ ಇರುವುದು ಕಂಡುಬರುತ್ತದೆ ಎಂದರೆ ಸರಿಯಲ್ಲ. ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದಾಗ ವಳಗೆರೆಹಳ್ಳಿ ಗ್ರಾಮದ ಸೈಟ್ ನಂ.1025 ಕ್ಕೆ ಸಂಬಂದಪಟ್ಟ ದಾಖಲೆಗಳು ಇರುತ್ತವೆ ಎಂದರೆ ಸರಿ ಈ ಪ್ರಕರಣ ದಾಖಿಸುವ ಹಿಂದಿನ ದಿನಗಳಲ್ಲಿ ಸದರಿ ಸೈಟನ್ನು ಪಂಚಾಯಿತಿಯ ವಾಪ್ತಿಗೆ

ಸೇರಿರುತ್ತದೆ ಎಂದು ಟಾಂ ಟಾಂ ಮಾಡಿಸಿರುವ ಬಗ್ಗೆ ದಾಖಲೆಗಳು ಇರುತ್ತದೆ ಸದರಿ ಆಸ್ತಿ ತನಗೆ ಸೇರಿರುತ್ತದೆ ಎಂದು ಚಾಸಾ- 1 ರವರು ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ ಎನ್ನುವುದು ಸಹಾ ಕಂಡುಬಂದಿರುತ್ತದೆ. ಎಲ್ಲಾ ದಾಖಲೆಗಳನ್ನು ಪರೀಶಿಲನೆ ಮಾಡಿದಾಗ ಸೈಟ್ ನಂ.1025 ಪಿರ್ಯಾದಿಗೆ ಸಂಬಂದಪಟ್ಟಿದ್ದಲ್ಲ ಎಂದು ಕಂಡುಬಂದಿರುತ್ತದೆ. ಇದು ಸಿವಿಲ್ ಸ್ವರೂಪದ ವ್ಯಾಜ್ಯ ಎಂದು ಕಂಡುಬಂದಿದ್ದರೂ ಸಹಾ ವೈಜ್ಞಾನಿಕ ತನಿಖೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಮೇಲೆ ಯವೂದೇ ಆರೋಪಿ ಸಾಬೀತಾಗದೇ ಇದ್ದರೂ ಸಹಾ ಆರೋಪಿತರ ವಿರುದ್ಧ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

13. ಚಾಸಾ-2 ರವರು ತಮ್ಮ ಹೇಳಿಕೆ ನೀಡುವ ಸಮಯ "2ನೇ ಆರೋಪಿ ನನ್ನ ಮಗನನ್ನು ಹಿಡಿದು ಹೊಡೆದ, 3ನೇ ಆರೋಪಿ ಕೈಗಳಿಂದ ನನ್ನ ಕಪಾಲಕ್ಕೆ ಹೊಡೆದು ಚಪ್ಪಲಿ ಕಾಲಿನಿಂದ ನನಗೆ ಒದ್ದನು, ಹೊಲಯ ಮಾದಿಗೆ ಶೇವಿಂಗ್ ಮಾಡಿಸುತ್ತೇನೆ ಎಂದು ಹೇಳುತ್ತೀಯಾ ಎಷ್ಟು ಧೈರ್ಯ ಎಂದು ಅವಾಚ್ಯ ಶಬ್ದದಿಂದ ಬೈದು ಜಾತಿ ನಿಂದನೆ ಮಾಡಿದರು " ಎಂದು ಹೇಳಿಕೆ ನೀಡಿರುವುದಿಲ್ಲ.

14. ಚಾಸಾ-2 ರವರು ತಮ್ಮ ಹೇಳಿಕೆ ನೀಡುವ ಸಮಯ "ಶೇವಿಂಗ್ ಮಾಡಿ ಎಂದು ಕೇಳಿದ್ದಕ್ಕೆ ಆರೋಪಿತರು ನನಗೆ ಜಾತಿ ಹಿಡಿದು ನಿಂದನೆ ಮಾಡಿದ್ದರು" ಎಂದು ಹೇಳಿಕೆ ನೀಡಿರುವುದಿಲ್ಲ.

15. ಚಾಸಾ-3 ರವರು ತಮ್ಮ ಹೇಳಿಕೆ ನೀಡುವ ಸಮಯ "ಸುಮಾರು 5 – 5ವರೆ ವರ್ಷದ ಹಿಂದೆ ಬೆಳಿಗ್ಗೆ 8.30 ಗಂಟೆ ಸಮಯದಲ್ಲಿ ನಾನು ಚಾಸಾ- 1 ಹಾಗೂ 2 ಇದ್ದಾಗ ನಮ್ಮ ಮಗ ಕಟಿಂಗ್ ಶೇವಿಂಗ್ ಮಾಡಲು ಕೇಳಿದಾಗ ಎಲ್ಲಾ ಆರೋಪಿತರು, ರೂಪೇಶ್ ಕುಮಾರ, ರಮೇಶ, ಉಮೇಶ, ನಾರಾಯಣ, ಮರಿಯಪ್ಪ ಇವರುಗಳು ನಮ್ಮ ಮನೆಯ ಒಳಗೆ ಅಕ್ರಮ ಪ್ರವೇಶ ಮಾಡಿ ಇದುಪಂಚಾಯಿತಿ ಮನೆ ನೀವು ಇರುವಹಾಗಿಲ್ಲ, ನಿಮ್ಮ ಮನೆಯಲ್ಲೆ ಕಟಿಂಗ್ ಶೇವಿಂಗ್ ಶಾಪ್ ಮಾಡುತ್ತೇವೆ ಎಂದು ಚೇರು, ಕನ್ನಢಿ ಬಾಚಣಿಗೆ, ಬಟ್ಟ, ಬಿಂದಿಗೆ ಇವುಗಳನ್ನುತಂದು ಮನೆಯಒಳಗೆ ಇಟ್ಟು" ಎಂದು ಹೇಳಿಕೆ ನೀಡಿರುವುದಿಲ್ಲ.

16. ಚಾಸಾ-3 ರವರು ತಮ್ಮ ಹೇಳಿಕೆ ನೀಡುವ ಸಮಯ "1ನೇ ಆರೋಪಿ ನನ್ನ ಗಂಡ ಚಾಸಾ- 2 ರವರ ಕತ್ತಿನ ಪಟ್ಟಿ ಹಿಡಿದು ಎಳೆದಾಡಿ ನನ್ನನ್ನು ಮನೆಯಿಂದ ಆಚೆ ಎಳೆದುಕೊಂಡು ಬಂದಾಗ ನನ್ನ ಮಗ ಕೇಳಿದ್ದಕ್ಕೆ 2ನೇ ಆರೋಪಿ ನನ್ನ ಮಗನನ್ನು ಹಿಡಿದು ಹೊಡೆದು 3ನೇ ಆರೋಪಿಕೈಗಳಿಂದ ಚಾಸಾ- 2 ರವರ ಕಪಾಲಕ್ಕೆ ಹೊಡೆದು ಚಪ್ಪಲಿ ಕಾಲಿನಿಂದ ಚಾಸಾ- 2 ರವರಿಗೆ ಒದ್ದನು" ಎಂದು ಹೇಳಿಕೆ ನೀಡಿರುವುದಿಲ್ಲ.

17. ಚಾಸಾ-3 ರವರು ತಮ್ಮ ಹೇಳಿಕೆ ನೀಡುವ ಸಮಯ "ಶೇವಿಂಗ್ ಮಾಡಿ ಎಂದು ಕೇಳಿದ್ದಕ್ಕೆ ಆರೋಪಿತರು ಜಾತಿ ಹಿಡಿದು ನಿಂದನೆ ಮಾಡಿ ಅವಮಾನ ಮಾಡಿದ" ಎಂದು ಹೇಳಿಕೆ ನೀಡಿರುವುದಿಲ್ಲ.

18. ಚಾಸಾ-3 ರವರು ತಮ್ಮ ಹೇಳಿಕೆ ನೀಡುವ ಸಮಯ "ನಾವು ಹೊಲಯ ಮಾದಿಗರಾಗಿದ್ದರಿಂದ ಕಟಿಂಗ್ ಮಾಡಲು ನಿರಾಕರಿಸಿದ್ದು ಕಟಿಂಗ್ ಮಾಡಿ ಎಂದು ನನ್ನ ಮಗ ಕೇಳಿದ್ದರಿಂದ ಆರೋಪಿ ಗಲಾಟೆ ಮಾಡಿರುತ್ತಾರೆ" ಎಂದು ಹೇಳಿಕೆ ನೀಡಿರುವುದಿಲ್ಲ.

19. **ಮರು ವಿಚಾರಣೆ:** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**
**ನ್ಯಾಯಾಲಯ, ಮಂಡ್ಯ**